ಸಾಕ್ಷಿಯನ್ನು ದಿ: 18.06.2025 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಡಿ.ಡಬ್ಲ್ಯೂ-1

<u>ಪಾಟೀಸವಾಲುಃ- ವಾದಿಗಳ ಪರ ಶ್ರೀ ಕೆ ಪಿ ಎಂ ವಕೀಲರಿಂದ ಃ-</u>

1. ವಾದಿಯು ನನ್ನ ಸಂಬಂಧಿಯಾದ ಕಾರಣ ವ್ಯವಹಾರಕ್ಕೆ ಸಂಬಂಧಿದಂತೆ ಯಾವುದೇ ದಾಖಲಾತಿಯನ್ನು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. 2007 ರಲ್ಲಿ ವಾದಿಯಿಂದ ಮುಂಗಡ ಹಣಪಡೆದುಕೊಂಡು ಸ್ವಾಧೀನ ಬಿಟ್ಟುಕೊಟಿಟರುತ್ತೇನೆ ಎಂದರೆ ಸರಿಯಲ್ಲ. ಅಲ್ಲಿಂದ ಇಲ್ಲಿಯವರೆಗೂ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವ್ಯವಸಾಯ ಮಾಡಲು ಸಾಕಷ್ಟು ಹಣ ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ. ಯಾವುದೇ ಲಿಖಿತ ಪತ್ರ ಪಡೆದುಕೊಳ್ಳದೆ 5 ಮತ್ತು 6 ನೆ ಪ್ರತಿವಾದಿಯರ ದುರುದ್ದೇಶದಿಂದ ಹೆಚ್ಚು ಹಣ ಪಡೆದುಕೊಳ್ಳಲು ಮಾರಾಟ ಮಾಡಲು ಕರಾರು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯು ನನ್ನ ಕುಟುಂಬಕ್ಕೆ ದಾವಾ ಸಲ್ಲಿಸಿದಾಗಿಂದಲು ಸಹಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು ಈಗಲು ಸಹ ದಾವಾ ಸ್ವತ್ತನ್ನು ಖರೀದಿ ಮಾಡಲು ಸಿದ್ದವಾಗಿದ್ದಾರೆ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

1 ನೇ ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ
ಮಳವಳ್ಳಿ.